ಆ) ಪರಿಶಿಷ್ಟ ಜಾತಿ-ಜನಾಂಗದವರಿಗೆ ಮೀಸಲಿದ್ದ ಕ್ಷೇತ್ರಗಳೆಷ್ಟು?

ಇ) ಪರಿಶಿಷ್ಟ ಜಾತಿಗೆ ಸೇರಿದ ಎಷ್ಟು ಸದಸ್ಯರು ಆಯ್ಕೆಯಾಗಿದ್ದಾರೆ; (ಎಸ್.ಸಿ.)

ಈ) ಪರಿಶಿಷ್ಟ ಜನಾಂಗಕ್ಕೆ ಸೇರಿದ ಎಷ್ಟು ಸದಸ್ಯರು ಆಯ್ಕೆಯಾಗಿದ್ದಾರೆ (ಎಸ್.ಟಿ)

ಉ) ಪರಿಶಿಷ್ಟ ಜಾತಿ-ಜನಾಂಗದವರಿಗೆ ಪ್ರತ್ಯೇಕ ಮೀಸಲಾತಿ.ಪ್ರಮಾಣ ಸರಿಯಾಗಿದೆಯೇ?

ಊ) ಹಾಗಿದ್ದಲ್ಲಿ, ಪ್ರಮಾಣದಲ್ಲಿ ವ್ಯತ್ಯಾಸವಿದ್ದರೆ ಸರಿಪಡಿಸಲು ಸರ್ಕಾರ ಸಿದ್ಧವಿದೆಯೇ?

ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) 135

ಆ) ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆ 1966ರ ಪ್ರಕರಣ 11 (1)ರ ಪ್ರಕಾರ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಪ್ರತಿ ಸಮಿತಿಗೆ ಎರಡು ಕ್ಷೇತ್ರಗಳು ಮೀಸಲಿರುತ್ತದೆ.

ಇ ಮತ್ತು ಈ) 103 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆದಿದ್ದು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ ಸೇರಿದ 206 ಸದಸ್ಯರು ಆಯ್ಕೆಯಾಗಿದ್ದಾರೆ.

ಉ) ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆ 1966ರ ಪ್ರಕರಣ 11 (1)ರ (1)ರ ಪ್ರಕಾರ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ ಪ್ರತಿ ಸಮಿತಿಗೆ ಎರಡು ಕ್ಷೇತ್ರಗಳು ಮೀಸಲಿರುತ್ತದೆ.

ಊ) ಉದ್ಭವಿಸುವುದಿಲ್ಲ.

ವಿಷಯ: ಮುಧೋಳ ಪಟ್ಟಣದಲ್ಲಿ ಕೊಳಚೆ ನಿವಾಸಿಗಳಿಗೆ ಮನೆಗಳು.

2612 (3547)

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಧೋಳ ಪಟ್ಟಣದಲ್ಲಿ ಕೊಳಚೆ ನಿವಾಸಿಗಳಿಗಾಗಿ ಕಟ್ಟಿದ ಮನೆಗಳು ಅಪೂರ್ಣವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ವಿಳಂಬಕ್ಕೆ ಕಾರಣವೇನು?

ಅ) ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು?

ಇ) ಅಪೂರ್ಣಗೊಂಡ ಮನೆಗಳಲ್ಲಿ ಫಲಾನುಭವಿಗಳ ಬದಲಾಗಿ ಬೇರೆಯವರು ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಖಾಲಿ ಮಾಡಿಸಲು ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಮಂಡಳಿಯ ವತಿಯಿಂದ ಮುಧೋಳ ಪಟ್ಟಣದಲ್ಲಿ ಕೈಗೊಂಡಿರುವ 100 ಮನೆಗಳ ನಿರ್ಮಾಣದ ಕೆಲಸವು ಕಿಟಕಿ ಮತ್ತು ಬಾಗಿಲುಗಳನ್ನು ಅಳವಡಿಸುವ ಕಾಮಗಾರಿ ಹೊರತು ಪಡಿಸಿದಂತೆ ಪೂರ್ಣಗೊಂಡಿರುತ್ತದೆ. ಕಿಟಕಿ ಮತ್ತು ಬಾಗಿಲುಗಳನ್ನು ಪೂರೈಸಬೇಕಾಗಿದ್ದ ಗುತ್ತಿಗೆದಾರರು ನಿಗಧಿತ ಅವಧಿಯಲ್ಲಿ ಪೂರೈಸಲು ವಿಫಲರಾಗಿರವುದೇ ವಿಳಂಬಕ್ಕೆ ಕಾರಣವಾಗಿದೆ.

ಆ) ಕಿಟಕಿ ಮತ್ತು ಬಾಗಿಲುಗಳನ್ನು ಅಳವಡಿಸುವ ಬಾಕಿ ಕೆಲಸಕ್ಕೆ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ. ಗುತ್ತಿಗೆದಾರರನ್ನು ನೇಮಿಸಿ ಟೆಂಡರ್ ಒಪ್ಪಂದದ ಅವಧಿಯ ಒಳಗಡೆಯೇ ಈ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಇ) ಈ ಮನೆಗಳಲ್ಲಿ ಸರ್ವೆ ನಂ.543ರ ಎ.ಪಿ.ಎಂ.ಸಿ ಯಾರ್ಡ್ ಹತ್ತಿರದ ಕೊಳಚೆ ನಿವಾಸಿಗಳೇ ಬಹುತೇಕವಾಗಿ ಬೇಸಿಗೆಯ ಬಿಸಿಲಿನ ಜಳ ಮತ್ತು ಮಳೆಯಿಂದ ತಮ್ಮ ಕುಟುಂಬಗಳನ್ನು ಸಂರಕ್ಷಿಸುವ ಸಲುವಾಗಿ ಆಕ್ರಮಿಸಿಕೊಂಡಿರುತ್ತಾರೆ. ಇವರುಗಳ ಪೈಕಿ ಕೇವಲ 4-5 ಕುಟುಂಬಗಳು ಮಾತ್ರ ಇತ್ತೀಚೆಗಷ್ಟೇ ಕೊಳಚೆ ಪ್ರದೇಶದಲ್ಲಿ ಬಂದು ನೆಲೆಸಿದ್ದು ಅನಧಿಕೃತವಾಗಿ ಸೇರಿಕೊಂಡಿರುವವರಾಗಿರುತ್ತಾರೆ. ಮನೆಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಮಂಡಳಿಯ ಕಾನೂನು ರೀತ್ಯಾ ಹೊರಹಾಕಲು ಕ್ರಮ ಕೈಗೊಳ್ಳಲಾಗುವುದು.

ವಿಷಯ: ಮುಧೋಳ್ ತಾಲ್ಲೂಕಿನಲ್ಲಿ ಆಶ್ರಯ ಮನೆಗಳನ್ನು ನಿರ್ಮಿಸಲು ಭೂ ಮಂಜೂರಾತಿ.

2613 (3312)

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಧೋಳ್ ತಾಲ್ಲೂಕಿನ 20 ಹಳ್ಳಿಗಳಲ್ಲಿ ಆಶ್ರಯ ಮನೆಗಳನ್ನು ಕಟ್ಟಲು ಜಾಗ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?